ಅವಮಾನಿಸುತ್ತ ತನ್ನ ಮನಸ್ಸಲ್ಲಿ ಬಾಸುಂಡೆಗಳನ್ನು ಎಬ್ಬಿಸುತ್ತಿದ್ದನ್ನು ನೆನಪಿಸಿಕೊಂಡ ಅಕ್ಷಯಕುಮಾರ, ತಾನೂ ಹಾಗೆಯೇ ಅಲ್ಲವೇ... ಈತನಲ್ಲಿ ಮಗ್ಗಿ ಕೇಳುತ್ತಿದ್ದುದು ಎಂಬುದನ್ನು ನೆನಪಿಸಿಕೊಂಡು ಮತ್ತಷ್ಟು ಹನಿಗಣ್ಣಾದ.

ಮೀನ ಮರಿಯ ಹಾಡು ಹೇಳಿ ಇನ್ನಷ್ಟು ಉಲ್ಲಸಿತನಾದ ಕೌಶಿಕ, 'ಅಮ್ಮ... ಬಾ ಬಾ ಗಿಳಿಯೇ... ಬಣ್ಣದ ಗಿಳಿಯೇ... ಪದ್ಯ ಹೇಳ್ಲೇನಮ್ಮ...' ಎಂದು ಮೆಲುವಾಗಿ ಅಂದೊಡನೆ ಡಾ. ವಾಹೀದ್ ಅವರು 'ಇವತ್ತಿಗೆ ಇಷ್ಟು ಸಾಕು ಗಿಳಿರಾಯರೇ... ನೀವು ಹೋಗಿ ಆ ಮರದ ಬುಡದಿಂದ ನಿಮ್ಮ ಬಣ್ಣದ ಪೆನ್ಸಿಲ್ ಡಬ್ಬ, ಗಣಿತ ಪುಸ್ತಕ ಎಲ್ಲ ತಗೊಂಡು ಬನ್ನಿ... ನೋಡುವಾ...' ಎಂದು ಅಂದೊಡನೆ ಕೌಶಿಕ ನಗುತ್ತ, ಮರದ ಬುಡಕ್ಕೆ ಪದ್ರಾಡ್ (ಪರಾರಿ)!

ಕೌಶಿಕನ ಬಾಯಿಂದ ಶಬ್ದಗಳ ಮುತ್ತಾಗಿ ಉದುರಿದ್ದ ಪದಗಳನ್ನು ಕಂಡು ಕುಮುದ ಅಶ್ಚರ್ಯದಿಂದ ಮರಗಟ್ಟಿ ಹೋದಂತಿದ್ದಳು. ಎರಡು ವರ್ಷದ ಹಿಂದೆ ಅಜ್ಜ ರಾಮಯ್ಯ ಆಳ್ವರೇ ಊರಿನಲ್ಲಿ ನದಿ ಪಕ್ಕದಲ್ಲಿ ತಾನೇ ಹಾಡಿ... ನಲಿಸಿ... ಕಲಿಸಿದ್ದ ಹಾಡದು. ಮಗುವಿನ ತಲೆಯಲ್ಲಿ ಆ ಹಾಡು ಹಾಗೇ ಅಚ್ಚೊತ್ತಿ ಕೂತಿತ್ತು!

ಡಾ. ವಾಹೀದ್ ಸಾಹೇಬರು ಕಣ್ಣಲ್ಲಿ ನಗುತ್ತಲೇ, ಕೌಶಿಕನತ್ತ ಇಣುಕುತ್ತ, ಆತನ ಅಪ್ಪ ಅಮ್ಮನಿಗೆ ಒಂದು ಪುಟ್ಟ 'ಪ್ರವಚನ'ವನ್ನು ಆರಂಭಿಸಿದ್ದರು. 'ನೋಡಿ ಮಿ. ಅಕ್ಷಯಕುಮಾರ್... ನಿಮ್ಮ ಪುಟ್ಟ ಮಗ ಮಾತುಗಳಲ್ಲಿ ಗೆಲ್ಲಲಾಗದ್ದನ್ನು... ಮೌನದಲ್ಲಿ ಸಾಧಿಸ್ತಿದ್ದಾನೆ. ತನ್ನ ಗೆರೆ, ಚಿತ್ರ, ಬಣ್ಣ, ಬರಹ, ಆಟ, ಓಟ, ಹಾಡು, ಭಾವನೆಗಳಲ್ಲೇ ಆತ ನಿಮ್ಮ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿದ್ದಾನೆ. ಆತ ನಿಮ್ಮೆದುರು ಹಾಡಿದ್ನಲ್ವ... ಅದ್ರಲ್ಲಿ ಒಂದು ಮರಿ ಮೀನಿತ್ತಲ್ವ... ಅದು ತನ್ನದೇ ಸುಂದರ ಜಗತ್ತೊಂದನ್ನು ನಿರ್ಮಿಸಿಕೊಂಡು ಖುಷಿಯಾಗಿತ್ತು. ಬೆಸ್ತ ಬಂದ... ನಂತರ ಏನಾಯ್ತು ಅಂತ ನಿಮ್ಗೇ ಗೊತ್ತಲ್ವ. ನಿಮಗರಿವಿಲ್ಲದಂತೆ ನೀವೂ ಆತನ ಪಾಲಿಗೆ ಬೆಸ್ತನಾಗ್ತಿದ್ದೀರಿ; ನೀವೂ ಹಾಗೆ ಆಗ ಕೂಡ್ದು. ನೀವೂ ನೋಡಿ ಮಿ. ಅಕ್ಷಯಕುಮಾರ್, ಮಕ್ಕಳಲ್ಲೂ ಅವರಿಗರಿವಿಲ್ಲದಂತೆ ಕೆಲವು ಭಾವನೆಗಳು ಅವರಿಗೆ ಬೇಕಾದ ಕಾಲಕ್ಕೆ ಹೇಗೆ ತಟ್ಟನೆ ಹೊರ ಬರುತ್ತೆ ನೋಡಿ ! 'ಹಾಡೋ' ಅಂತ ಅಂದ್ರೆ ಆತ ಇದೇ ಮೀನಿನ ಹಾಡನ್ನೇ ಹಾಡ್ಬೇಕಿತ್ತಾ ? ಆತನೊಳಗಿದ್ದ ಈ ಹಾಡನ್ನು ಎಂದಾದರೂ ಆತ ನಿಮ್ಮಿಬ್ಬರೆದುರು ಹಾಡಿದ್ದಾನಾ? ಇಲ್ಲ ಅನ್ನೋದು, ನಿಮ್ಮ ಅಚ್ಚರಿಯ ಮುಖಭಾವದಲ್ಲೇ ನನಗೆ ತಿಳಿದೋಯ್ತು. ಹೋಗ್ಲಿ... ನೀವಿಬ್ರು, ಆತನ ಶಾಲೆಯಲ್ಲಿ ಕಲಿಸಿದ್ದ ಹಾಡುಗಳನ್ನು ಹಾಡಲು ಅವ್ನಿಗೆ ಎಂದಾದರೂ ಅವಕಾಶ ಮಾಡಿಕೊಟ್ಟಿದ್ದೀರಾ? ಒಮ್ಮೆ ಯೋಚಿಸಿ ನೋಡಿ. ಇಲ್ಲ... ನಿಮ್ಗೆ ಆತನ ಮಗ್ಗಿ, ಆ ಮಗ್ಗಿಯೊಳಗಿನ ಲಾಜಿಕ್ ಮಾತ್ರವೇ ಬೇಕು ಅಲ್ವಾ?... ಮನಸ್ಸು ಸತ್ತು ಬರೀ ಮನುಷ್ಯ ಬದುಕುವುದರಲ್ಲಿ ಏನು ಅರ್ಥ ಇದೆ ಹೇಳಿ !?... ನಮ್ಮಲ್ಲಿ ಹೆಚ್ಚಿನ ಮನುಷ್ಯರು ಬದುಕ್ತಿರೋದೇ ಹೀಗೇ...'

ಡಾ. ವಾಹೀದ್ ಅವರ 'ಪ್ರವಚನ' ಇನ್ನೂ ಮುಂದುವರಿದಿತ್ತು. ಕುಮುದ, ಅಕ್ಷಯಕುಮಾರನ ಮುಖಭಾವವನ್ನು ದಿಟ್ಟಿಸುತ್ತಿದ್ದಳು. ಅಷ್ಟರಲ್ಲಿ ಅಕ್ಷಯಕುಮಾರನ ಮೊಬೈಲ್ ರಿಂಗಾಯ್ತು! ಡಾ. ವಾಹೀದ್ ಮುಖ ಸಿಂಡರಿಸಿಕೊಂಡೇ, 'ಕಟ್ ಮಾಡಿ ಪ್ಲೀಸ್ ಅದನ್ನ' ಎಂದು ಅಂದರು ತುಸು ಅಸಮಧಾನದಿಂದಲೇ. ಆ ರಿಂಗಣದಿಂದ ವೈದ್ಯರಲ್ಲಿ ಅಸಮಾಧಾನದ ಅಲೆ ಎದ್ದಿದ್ದರೆ... ಕುಮುದಳೊಳಗೆ ಕುತೂಹಲದ ಅಲೆ ಎದ್ದಿತ್ತು. ಕುಮುದ ಕ್ಷಣ ಮಾತ್ರದಲ್ಲಿ ಮೊಬೈಲ್‌ನ ಕಾಲರ್‌ನೇಮ್ ಮೇಲೆ ಕಣ್ಣಾಡಿಸಿದ್ದಳು. ಅದು ಹೊಸ ಶಾಲೆಯ